**<u>ಸಾಕ್ಷಿಯನ್ನು ದಿನಾಂಕಃ 14-11-2025 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.</u>**

**<u>ಪಾಟೀಸವಾಲುಃ ಪ್ರತಿವಾದಿ ಪರ ವಕೀಲರವರಿಂದಃ</u>**

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ಆಂಗ್ಲ ಭಾಷೆಯಲ್ಲಿರುವ ಅಫಿಡವಿಟನ್ನು ಕನ್ನಡಕ್ಕೆ ಅನುವಾದಿಸಿ ನನಗೆ ಓದಿ ಹೇಳಲಾಗಿದೆ ಎಂದು ಉಲ್ಲೇಕ ಸಾಕ್ಷಿ ಪ್ರಮಾಣ ಪತ್ರದಲ್ಲಿ ಇರುವುದಿಲ್ಲ ಅಂದರೆ ಸರಿ. ನಾವು ಅರಸಿನ ಗುಂಡಿ ವಂಶಕ್ಕೆ ಸೇರಿದ್ದವನಾಗಿದ್ದೇವೆ. ಅದನ್ನು ತೋರಿಸಲು ವಂಶವೃಕ್ಷವನ್ನು ನಾನು ಹಾಜರು ಪಡಿಸಿದ್ದೇನೆ. ನಾನು ಆ ರೀತಿ ಯಾವುದೇ ವಂಶವೃಕ್ಷವನ್ನು ಹಾಜರು ಪಡಿಸಿರುವುದಿಲ್ಲ ಅಂದರೆ ಸರಿಯಲ್ಲ. ಮೂತಃ ದಾವಾ ಅಸ್ತಿ ನನ್ನ ತಾತನ ಹೆಸರಿನಲ್ಲಿ ಇತ್ತು. ಆ ಬಗ್ಗೆ ನೊಂದಾಯಿತ ಪಾರಿಕತ್ತ ನೊಂದಣಿ ದಾಖಲೆಯನ್ನು ಹಾಜರು ಪಡಿಸಿದ್ದೇನೆ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನೊಂದಾಯಿತು ಪಾರಿಕತ್ತ ಎಂಬ ದಾಖಲೆಯೇ ಇರುವುದಿಲ್ಲ ಅಂದರೆ ಸರಿಯಲ್ಲ.

2. ಆ ರೀತಿ ಪಾರಿಕತ್ತ ನೊಂದಣಿ ಆಗುವ ಪೂರ್ವದಲ್ಲಿ ದಾವಾ ಅಸ್ತಿ ಮಹಾದೇವಪ್ಪನ ಹೆಸರಿನಲ್ಲಿ ಇತ್ತು. *ಈ ಹಂತದಲ್ಲಿ ಪಾರಿಕತ್ತ ಎಂದರೆ ಏನು ಎಂದು ನ್ಯಾಯಾಲಯವೇ ಸಾಕ್ಷಿದಾರರನ್ನು ಪ್ರಶ್ನಿಸಿದಾಗ ಅಣ್ಣ ತಮ್ಮಂದಿರು ಬೇರೆ ಆಗುವಾಗ ಮಾಡಿಕೊಳ್ಳುವ ಪಾಲು ಪಟ್ಟಿಯನ್ನು ಪಾರಿಕತ್ತ ಎಂದು ಕರೆಯುವರು ಎಂದು ನುಡಿದರು.* ಸದರಿ ಪಾಲು ಪಟ್ಟಿ 1973 ರಲ್ಲಿ ನೊಂದಣಿ ಆಗಿರುತ್ತದೆ. ಸದರಿ ಪಾಲು ಪಟ್ಟಿಯು ಗಂಗಮ್ಮ ಹಾಗೂ ಮಹಾದೇವಪ್ಪನ ನಡುವೆ ಆಗಿರುತ್ತದೆ. ನನಗೆ ಗಂಗಮ್ಮನ ತಂದೆ ತಾಯಿ ಹೆಸರು ಗೊತ್ತಿರುವುದಿಲ್ಲ. ಅಜ್ಜಪ್ಪನ ತಂದೆಯ ಹೆಸರು ನಾಗಪ್ಪ ಮತ್ತು ತಾಯಿಯ ಹೆಸರು ಶಾರದಮ್ಮ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

3. ಸದರಿ ನಾಗಪ್ಪ ತೀರಿಕೊಂಡ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಅರಸಿನಗುಂಡಿ ಗಂಗಮ್ಮಳಿಗೆ ಹಾಲೇಶಪ್ಪ ಎಂಬ ಒಬ್ಬ ಮಾತ್ರ ಮಗನಿರುವನು. ಸದರಿ ಹಾಲೇಶಪ್ಪನಿಗೆ 3

ಜನ ಮಕ್ಕಳು ಅವರೆಂದರೆ ಗೌರಮ್ಮ, ಅಜ್ಜಪ್ಪ ಮತ್ತು ಬಸವರಾಜ. ಗೌರಮ್ಮಳಿಗೆ ಇಬ್ಬರು ಮಕ್ಕಳು ಅವರೆಂದರೆ ಚೆನ್ನಬಸ್ಸಜ್ಜ ಮತ್ತು ಶರತ್.

4. ದಾವಾ ಅಸ್ತಿಯ ಒಟ್ಟು ಸರ್ವೆ ನಂಬರು 399/ಬಿ ಎಂದು ಇದ್ದು ಅದರ ಒಟ್ಟು ವಿಸ್ತೀರ್ಣ 2 ಎಕರೆ 92 ಸೆನ್ಸ ಇರುವುದು. ಆ ಸರ್ವೆ ನಂ 1968 ರಿಂದ 2000 ರ ವರೆಗೆ ಯಾರ ಹೆಸರಿನಲ್ಲ ಇತ್ತು ಎಂದು ನನಗೆ ಗೊತ್ತಿಲ್ಲ. ದಿನಾಂಕ 10.03.1998 ರಂದು ಸರ್ವೆ ನಂ 399/ಬಿ ಅಲ್ಲಿ 2 ಎಕರೆಯನ್ನು 5 ನೇ ಪ್ರತಿವಾದಿ ಖರೀದಿ ಮಾಡಿದ್ದರು ಅಂದರೆ ಸರಿ. ಆ ವಿಚಾರ ಖರೀದಿ ಮಾಡಿದ ದಿನವೇ ನನಗೆ ಗೊತ್ತಿತ್ತು ಅಂದರೆ ಸರಿಯಲ್ಲ.

5. ಸದರಿ ಖರೀದಿ ಪತ್ರವನ್ನು ನಾನು ಈ ನ್ಯಾಯಾಲಯದಲ್ಲಿ ಹೊರತು ಪಡಿಸಿ ಬೇರೆ ಎಲ್ಲಿಯೂ ಪ್ರಶ್ನಿಸಿರುವುದಿಲ್ಲ. ಸದರಿ ಖರೀದಿ ಪತ್ರದ ಅಧಾರದ ಮೇಲೆ ಹನುಮಜ್ಜಿ ಚೆಂದ್ರಪ್ಪನ ಹೆಸರಿನಲ್ಲಿ ಮುಟೇಶನ್ ಆಯಿತು ಅಂದರೆ ನನಗೆ ಗೊತ್ತಿಲ್ಲ. ಹನುಮಜ್ಜಿ ಚಂದ್ರಪ್ಪನು 2003 ರಲ್ಲಿ ಹೊಸಮನಿ ತಿಮ್ಮಪ್ಪನಿಗೆ ಮಾರಾಟ ಮಾಡಿದನು ಅಂದರೆ ನನಗೆ ಗೊತ್ತಿಲ್ಲ. ಆ ವಿಚಾರಗಳನ್ನು ದಾಖಲೆಯ ಅಧಾರದ ಮೇಲೆ ವಾದ ಪತ್ರದಲ್ಲಿ ನಾನೇ ಬರೆಸಿದ್ದೇನೆ. ಹೊಸಮನಿ ತಿಮ್ಮಪ್ಪನ ಹೆಸರಿಗೆ ಆದ ಮುಟೇಶನನ್ನು ನಾನು ಎಲ್ಲಿಯೂ ಪ್ರಶ್ನಿಸಿರುವುದಿಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು ನೀಡಲಾಯಿತು.

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿಯಿದೆ.**

**14-11-2025**
**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ**

**ಸಾಕ್ಷಿಯ ಸಹಿ** 14.11.2025